# ಆಹಾ ಸುದ್ದಿ!

★ ಸಸಿತೋಟ

ಈಕೆ 42ರ ಹರೆಯದ ಸಾಂಡ್ರಾ. ಸೊಂಡಿಲಿನಲ್ಲಿ ಕುಂಚ ಹಿಡಿದು ಕ್ಯಾನ್‌ವಾಸ್ ಮೇಲೆ ಕಲೆ ಅರಳಿಸತೊಡಗಿದರೆ ಯಾವ ಕಲಾವಿದನಿಗೂ ಕಡಿಮೆಯಿಲ್ಲ. ಹಂಗರಿಯಲ್ಲಿ ಸರ್ಕಸ್ ಕಲಾವಿದೆಯೂ ಆಗಿರುವ ಭಾರತದ ಮೂಲದ ಈ ಆನೆಯ ಅಮೂರ್ತ ಕಲಾಕೃತಿಗಳು ಬಿಸಿ ದೋಸೆಯಂತೆ ಮಾರಾಟವಾಗುತ್ತಿವೆಯಂತೆ. ಡಬಲ್ ಶಿಫ್ಟ್‌ನಲ್ಲಿ ದುಡಿಯುತ್ತಿದೆ ಈ ಆನೆ.



ಅಮೆರಿಕದ ಕಾನ್ಸಾಸ್ ನಗರದಲ್ಲಿ ಮಾದಕ ದ್ರವ್ಯ ಸಾಗಣೆ ಮಾಡುತ್ತಿದ್ದ ಸೀನ್ ಎಂಬಾತನ ವಿಚಾರಣೆ ಮಾಡಲು ಪೊಲೀಸರು ಹಿಂಜರಿಯುತ್ತಿದ್ದಾರಂತೆ. ವಿಚಾರಣೆಗೆ ಹೋದಾಗಲೆಲ್ಲ ಸೀನ್ ಕುರ್ಚಿಯಲ್ಲಿ ಓರೆ ಕುಳಿತುಕೊಂಡು ಭಾರಿ ಪ್ರಮಾಣದ ಗ್ಯಾಸ್ ಬಿಡುಗಡೆ ಮಾಡುತ್ತಿದ್ದು, ತನಿಖಾ ಅಧಿಕಾರಿಗಳು ಮೂಗು ಮುಚ್ಚಿಕೊಂಡು ಕೊಠಡಿಯಿಂದ ಹೊರಗೋಡಿ ಬರುತ್ತಿದ್ದಾರಂತೆ. ಬೆದರಿಕೆ ಹಾಕಲು ಸೀನ್ ಬಾಂಬ್‌ಗಿಂತ ಭಾರಿ ಅಸ್ತ್ರವನ್ನೇ ಇಟ್ಟುಕೊಂಡಿದ್ದಾನೆ.



ಇದು ಸಿಂಗಪುರದ ಕಚೇರಿಯೊಂದರ 'ಕೋಪ ಗೃಹ'. ಕೆಲಸದ ಒತ್ತಡದಿಂದ ಏರುವ ಉದ್ವೇಗ, ಸಿಟ್ಟನ್ನು ಇಳಿಸಲು ಉದ್ಯೋಗಿಗಳು ಈ ಕೊಠಡಿಗೆ ಯಾವಾಗ ಬೇಕಾದರೂ ತೆರಳಬಹುದಂತೆ. ಗಾಜಿನ ಬಾಟಲ್‌ನಿಂದ ಹಿಡಿದು ಟಿವಿ ಸೆಟ್‌ವರೆಗೂ ಇರುವ ವಸ್ತುಗಳ ಮೇಲೆ ಬೇಸ್‌ಬಾಲ್ ಬ್ಯಾಟ್‌ನಿಂದ ಸಿಟ್ಟನ್ನು ತೋರಿಸಿ ಒಡೆದು ಹಾಕಬಹುದಂತೆ. ಕಸದಿಂದಲೇ ಕೆಲಸ ಮಾಡಲು ಹೊರಟಿವೆ ಅಲ್ಲಿಯ ಕಂಪೆನಿಗಳು.

ಲಂಡನ್ನಿನ ವಿಜ್ಞಾನಿಗಳು ಕುರಿಗಳಿಗೆ ಸೆಲೆಬ್ರಿಟಿಗಳನ್ನು ಗುರುತಿಸುವ ಪಾಠ ಹೇಳುತ್ತಿದ್ದಾರಂತೆ. ವ್ಯಕ್ತಿಯನ್ನು ಸರಿಯಾಗಿ ಗುರುತಿಸಿದರೆ ಒಂದು ಹಿಡಿ ಹುಲ್ಲಿನ ಬಹುಮಾನ. ತಪ್ಪಾಗಿ ಗುರುತಿಸಿದರೆ ಬಕ್ರಾ ಎಂಬ ವಿಶೇಷ ಪ್ರಶಸ್ತಿ ಇದ್ದೇ ಇದೆಯಲ್ಲ.



ಆಸ್ಟ್ರೇಲಿಯಾದಲ್ಲಿ ಕೋಟ್ಯಂತರ ಡಾಲರ್ ಖರ್ಚು ಮಾಡಿ ಹಾಕಿರುವ ಬ್ರಾಡ್‌ಬ್ಯಾಂಡ್ ಕೇಬಲ್‌ಗಳನ್ನು ಮತ್ತೆ ಹೊಸದಾಗಿ ಹಾಕಬೇಕಾದ ಪ್ರಸಂಗ ಎದುರಾಗಿದೆಯಂತೆ. ಈ ಕೇಬಲ್‌ಗಳನ್ನು ಹಾಳು ಮಾಡಿದವರು ಯಾರು ಎಂದು ಹುಡುಕುತ್ತ ಹೋದರೆ ಸಿಕ್ಕ ಅಪರಾಧಿಗಳೆಂದರೆ ದೊಡ್ಡ ಜಾತಿಯ ಜುಟ್ಟುಗಿಳಿ (ಕಾಕಟೂ)ಗಳು. ಹರಿತ ಕೊಕ್ಕುಳ್ಳ ಈ ಗಿಳಿಗಳು ಕೇಬಲ್‌ಗಳನ್ನೇ ಅಗಿದು ಹಾಕಿವೆಯಂತೆ. ನಮ್ಮಲ್ಲಿ ಕೇಬಲ್‌ಗಳನ್ನೇ ನುಂಗುವ ವ್ಯಕ್ತಿಗಳಿರುವಾಗ ಗಿಳಿಗಳೇನು ಮಹಾ, ಅಲ್ಲವೇ!



ಪಾಕಿಸ್ತಾನದ 14ರ ಈ ಬಾಲಕ ಸಮೀರ್ ಖಾನ್ ತಲೆಯನ್ನು 180 ಡಿಗ್ರಿಗೆ ತಿರುಗಿಸುತ್ತಾನೆ. ಅಂದರೆ ಸಂಪೂರ್ಣ ಹಿಂದಕ್ಕೆ ಮುಖ ತಿರುಗುತ್ತದೆ. ಸತತ ಪರಿಶ್ರಮದಿಂದ ಇದನ್ನು ಸಾಧಿಸಿರುವ ಈತನಿಗೆ ಹಾಲಿವುಡ್‌ನ ಹಾರರ್ ಸಿನಿಮಾಗಳಲ್ಲಿ ಅಭಿನಯಿಸುವ ಆಸೆಯಂತೆ.